ಸಾಕ್ಷಿಯನ್ನು ದಿ: 06-07-2018ರಂದು ಪುನ: ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು:: ಶ್ರೀ ಎಂ ಆರ್ ಎಸ್ ಕೆ 1 ನೇ ಪ್ರತಿವಾದಿ ಪರ ವಕೀಲರಿಂದ::

.2011 ರಲ್ಲಿ ನನಗೆ ನಮ್ಮ ತಂದೆಗೆ ವಿಲ್ ಆಗಿರುವ ವಿಚಾರ ಗೊತ್ತಾಗಿದೆ. ಸದರಿ ವಿಲ್ ದಿನಾಂಕ ಗೊತ್ತಿಲ್ಲ. 29.6.2011 ರಂದು ನಮ್ಮ ತಂದೆ ಮೃತಪಟ್ಟಿದ್ದಾರೆ. ನಮ್ಮ ತಂದೆ ಮಾಡಿದ ವಿಲ್ ಪ್ರಕಾರ ನಾನು ಸದರಿ ಆಸ್ತಿಯ ಬಗ್ಗೆ ವಿಭಾಗ ಅಥವಾ ಖಾತೆ ಮಾಡಿಸಿಕೊಂಡಿಲ್ಲ. ವಿಲ್ ಪ್ರಕಾರ ವಿಭಾಗ ಮಾಡಿಕೊಂಡ ನಂತರ ಉಳಿದ ಸಹೋದರಿಯರಿಗೆ ನೋಟೀಸ್ ಕೊಟ್ಟಿರುತ್ತೀರಾ ಎಂದರೆ ಆ ಸಂದರ್ಭ ಬಂದಿಲ್ಲ. 26.5.2011 ರಲ್ಲಿ ನಮ್ಮ ತಂದೆಬಿ ಎಂ ಆಸ್ಪತ್ರೆಯಲ್ಲಿ ಅನಾರೋಗ್ಯದಿಂದ ಒಳರೋಗಿಯಾಗಿದ್ದರು. ಆಸ್ಪತ್ರೆಯಲ್ಲಿ ಒಳರೋಗಿಯಾಗಿದ್ದಾಗ ವಿಲ್ ಆಯಿತು ಎಂದರೆ ಸಾಕ್ಷಿ ನಂತರ ನನಗೆ ಗೊತ್ತಾಯಿತು ಎಂದು ಹೇಳುತ್ತಾರೆ. ವಿಲ್ ಪ್ರಕಾರ ಪ್ರಬೈಟ್ ಪಡೆದುಕೊಳ್ಳಲು ಅಥವಾ ಡಿಕ್ಲಾರೇಷನ್ ಗಾಗಿ ನಾನು ಯಾವುದೇ ದಾವೆ ಹಾಕಿಲ್ಲ. ಸದರಿ ವಿಲ್ ಪ್ರಕಾರ ಕೆಲವು ಆಸ್ತಿಗಳನ್ನು ನಾಲ್ಕನೇ ಒಂದು ಭಾಗ ಮತ್ತು ಕೆಲವು ಆಸ್ತಿಗಳಲ್ಲಿ ಐದನೇ ಒಂದು ಭಾಗ ಆಗಿದೆ. ವಿಲ್ ನಲ್ಲಿ ಕಾಣಿಸಿದ ಆಸ್ತಿಗಳು ಪಿತ್ರಾರ್ಜಿತ ಮತ್ತು ಜಂಟಿ ಕುಟುಂಬದ ಆಸ್ತಿಗಳು ಎಂದರೆ ಸರಿ ಅಲ್ಲ. ನಮ್ಮ ತಂದೆಗೇ ಸದರಿ ಆಸ್ತಿಗಳು ಸೇರಿವೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ವಿಜಯಶ್ರೀಪುರ ಬಡಾವಣೆ ಆಸ್ತಿಗೆ ಸಂಬಂಧಿಸಿದಂತೆ ನಮ್ಮ ತಂದೆ ಇದ್ದಾಗ ಮತ್ತು ಅವರ ನಂತರ ನಾನು ಮತ್ತು ನಮ್ಮ ಸಹೋದರಿಯರು ಮಾನ್ಯ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ನಲ್ಲಿ ಪ್ರಕರಣ ನಡೆಸಿದ್ದೇವೆ. ಯಾವುದೇ ನ್ಯಾಯಾಲಯದಲ್ಲಿ ಅಪ್ರಾಪ್ತ ವಯಸ್ಕರ ಮಕ್ಕಳಿಗೆ ಭಾಗ ಕೊಡುವಂತೆ ಆದೇಶ ಆಗಿಲ್ಲ. 1 ನೇ ಎದುರುದಾರರು ತಮಗೆ ಸೇರಿದ ಭಾಗ ಕೊಡುವಂತೆ ಹಲವಾರು ಬಾರಿ ನನ್ನನ್ನು ಕೇಳಿದ್ದಾರೆ ಎಂದರೆ ಸರಿ. ಸಾಕ್ಷಿ ನವೆಂಬರ್-2017 ರ ನಂತರ ಈ ರೀತಿ ಕೇಳಿದ್ದಾರೆ ಎಂದು ಹೇಳುತ್ತಾರೆ. ವಿಲ್ ಪ್ರಕಾರ ಆಸ್ತಿ ವಿಭಾಗ ಮಾಡಿಕೊಳ್ಳಲು ನನಗೆ ಯಾವುದೇ ತೊಂದರೆ ಇಲ್ಲ. ನಮ್ಮ ತಂದೆ ಮೃತಪಟ್ಟ ನಂತರ ಎಲ್ಲಾ ಆಸ್ತಿಗಳು ನನಗೆ ಮತ್ತು ನಮ್ಮ ಸಹೋದರಿಯರಿಗೆ ಮಾತ್ರ ಸೇರಬೇಕಾಗಿದೆ ಎಂದರೆ ಸರಿ ಅಲ್ಲ. 1 ನೇ ಎದುರುದಾರರು ವಿಭಾಗಕ್ಕಾಗಿ ಅಸಲು ದಾವಾ 87/2018 ಇದೇ ನ್ಯಾಯಾಲಯದಲ್ಲಿ ಸಲ್ಲಿಸಿದ್ದಾರೆ. ಸದರಿ ದಾವೆಯಲ್ಲಿ ವಿಜಯಶ್ರೀಪುರ ಆಸ್ತಿಯ ಪ್ರಸ್ತಾವನೆ ಇದೆ. ಆ ದಾವೆ ಮುಗಿಯುವವರೆವಿಗೆ ಅಪ್ರಾಪ್ತ ವಯಸ್ಕರ ಹಿತಾಸಕ್ತಿ ಮತ್ತು ಅವರ ಹೆಸರಿನಲ್ಲಿರುವ ಠೇವಣಿ ಹಣ



ರಕ್ಷಣೆ ಆಗುತ್ತದೆ ಎಂದರೆ ಸರಿ ಅಲ್ಲ. ಅಪ್ರಾಪ್ತ ವಯಸ್ಕರ ಪರವಾಗಿ ಇಟ್ಟಿರುವ ಠೇವಣಿ ಹಣದಲ್ಲಿ 1 ನೇ ಎದುರುದಾರರಿಗೆ ಭಾಗ ಬರಬೇಕು ಎಂದರೆ ಸರಿ ಅಲ್ಲ. ಠೇವಣಿ ಹಣದಲ್ಲಿ ಒಟ್ಟು ನಾಲ್ಕು ಭಾಗ ಮಾತ್ರ

ಮಾಡಬೇಕಾಗಿದ್ದು, ಐದು ಭಾಗ ಮಾಡ ಬೇಕಾಗಿಲ್ಲ ಎಂದರೆ ಸರಿ ಅಲ್ಲ.

<u>*ಪಾಟೀ ಸವಾಲು:: 2* ನೇ ಪ್ರತಿವಾದಿ *ಪರ ವಕೀಲ*ರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.</u>

*ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಮುಕ್ತ ನ್ಯಾಯಾಲಯದಲ್ಲಿ*
*ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಗಿದೆ.*

*ಓ ಹೇ ಕೇ ಸ ಇದೆ*

*ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ.,*
*ಮೈಸೂರು.*